

ರೈನ್‌ಬೋ ಸೇತುವೆ

ಹೋಗುವ ಅನುಭವ. ದೂರ ದೂರದಲ್ಲಿ ಎಲ್ಲೋ ಒಂದೆಡೆ ಪೆಟ್ರೋಲ್ ಬಂಕ್ ಅಥವಾ ಸುಂದರವಾದ ಕಟ್ಟಿಗೆ ಮನೆಗಳು. ಊರುಗಳು ತುಂಬಾ ವಿರಳ. ಊರು ಕಂಡರೂ, ಕೆಲವೇ ಮನೆಗಳು. ಅತ್ಯುತ್ತಮ ಹೆದ್ದಾರಿಯಲ್ಲಿ ಬರೀ ವಾಹನಗಳ ಓಡಾಟ. ಸುಮಾರು ನಾಲ್ಕು ಗಂಟೆಗಳ ಪ್ರಯಾಣದ ನಂತರ, ಬಫೆಲ್ಲೋ ನಗರ ದಾಟಿದೆವು. ಸೂರ್ಯ ತಲೆ ಮೇಲೆ ಬಂದಾಗ ನಾವು ನಯಾಗರ ತಲುಪಿದೆವು.

ಜಲಪಾತಕ್ಕೆ ಹೋಗುವ ದಾರಿಯಲ್ಲಿ ಸಿಗುವ ನದಿಯ ಮೇಲೆ ಕಟ್ಟಿದ ಸೇತುವೆ ದಾಟಿ, ಜಲಪಾತದ ಹತ್ತಿರ ಬಂದಾಗ ಏನೋ ಹರ್ಷೋಲ್ಲಾಸ. ದಾರಿಯ ಎಡಬದಿಗೆ ವಿಶಾಲವಾದ ನಯಾಗರ ನದಿ ನೀರಿನ ಹರಿವು. ರಮಣೀಯ ದೃಶ್ಯ. ವಾಹನದಿಂದ ಇಳಿದು, ಜಲಪಾತ ನೋಡಲು ಮುಂದುವರಿದೆವು. ಜಲಪಾತ ಕಾಣದಿದ್ದರೂ, ಭೋರ್ಗರೆವ ನೀರಿನ ಸಪ್ಪಳ, ನೀರು ನೆಲಕ್ಕೆಬಡಿದು ಎತ್ತರಕ್ಕೇರುವ ತುಂತುರು ಮಂಜಿನ ಮುಸುಕು! ಹೃದಯ ಖುಷಿಯಿಂದ ಸ್ವಲ್ಪ ವೇಗವಾಗಿಯೇ ಬಡಿದುಕೊಳ್ಳುತ್ತಿತ್ತು.

ಟಿಕೆಟ್ ಪಡೆದು ಅವಲೋಕನ ಗೋಪುರದ ಲಿಫ್ಟ್ ಮುಖಾಂತರ ಸುಮಾರು 280 ಅಡಿ ಕೆಳಗಿರುವ ಜಲಪಾತದಿಂದ ಇಳಿದ ನೀರಿನ ಹರಿವಿಗೆ ಬಂದೆವು. ಇಲ್ಲಿಯವರೆಗೆ ಸ್ವಲ್ಪ ಭಾಗ ಕಾಣುವ ಜಲಪಾತವನ್ನು, ಪೂರ್ಣವಾಗಿ ನೋಡಲು ಹೊರಟೆವು. ಇದೇ 'ಮೇಡ್ ಆಫ್ ದಿ ಮಿಸ್ಟ್' ದೋಣಿ ಪ್ರಯಾಣ. ರೇನ್‌ಬೋ ಸೇತುವೆ ಹತ್ತಿರದಲ್ಲಿರುವ ಶಾಂತ ನೀರಿನಲ್ಲಿ ನಿಂತ ದೋಣಿ ಏರಿದೆವು. ಪ್ರಯಾಣಕ್ಕೆ ಮುಂಚೆ, ಎಲ್ಲರೂ ಜಲಪಾತದಿಂದ ಸಿಂಪರಣೆಯಾಗುವ ನೀರಿನಿಂದ ನೆನೆಯದಂತೆ ತೆಳುವಾದ ರೈನ್‌ಕೋಟ್ ಧರಿಸಬೇಕಾಗುತ್ತದೆ. ದೋಣಿಯಲ್ಲಿ ಸುಮಾರು ನೂರಾ ಐವತ್ತು ಜನರಿದ್ದರು.

ನಯಾಗರ ಜಲಪಾತ ಕೆನಡಾದ ಒಂಟಾರಿಯೊ ಪ್ರಾಂತ್ಯ ಮತ್ತು ಅಮೆರಿಕದ ನ್ಯೂಯಾರ್ಕ್ ರಾಜ್ಯದ ನಡುವಿನ ಅಂತರರಾಷ್ಟ್ರೀಯ ಗಡಿಯಲ್ಲಿದೆ. ಇಲ್ಲಿ ಮೂರು ಜಲಪಾತಗಳಿವೆ. ಅಮೆರಿಕನ್ ಜಲಪಾತ ಮತ್ತು ಬ್ರೈಡಲ್ ವೇಲ್ ಜಲಪಾತಗಳು ಅಮೆರಿಕಾದಲ್ಲಿದ್ದರೆ, ಹಾರ್ಸ್‌ಶೂ ಜಲಪಾತ ಎರಡು ದೇಶಗಳ ಮಧ್ಯೆ ಇದೆ. ಹಾರ್ಸ್‌ಶೂಗೆ ಕೆನಡಾ ಜಲಪಾತ ಎಂದು ಕರೆಯೋದು ವಾಡಿಕೆ.

ಬ್ರೈಡಲ್ ವೇಲ್ ತುಂಬ ಚಿಕ್ಕದು. ಸಲಗದ ಪಕ್ಕದಲ್ಲಿ ಚಿಕ್ಕ ಮರಿ ಆನೆಯಂತೆ ಇದು ಅಮೆರಿಕದ ಜಲಪಾತದೊಂದಿಗೆ ಅಂಟಿಕೊಂಡಿದೆ.

ನಯಾಗರ ನದಿ ನೀರಿನಿಂದ ಚಿಮ್ಮುವ ಈ ಜಲಪಾತಗಳಿಗೆ, ಸುಮಾರು 25ಸಾವಿರ ಕಿ.ಮೀಯಷ್ಟು ವಿಸ್ತೀರ್ಣವಿರುವ  ಬೃಹತ್ 'ಏರೀ' ಎಂಬ ಸರೋವರದಿಂದ ನೀರು ಬರುತ್ತದೆ. ಏರೀ ಸರೋವರ ಅಮೆರಿಕಾದ ಐದು ಮಹಾನ್ ಸರೋವರಗಳಲ್ಲಿ ಒಂದು. ಇದರ ಮೂಲ, ಡೆಟ್ರಾಯಿಟ್ ನದಿ. ಜಲಪಾತದಿಂದ ಕೆಳಗಿಳಿದ ನೀರು ಇನ್ನೊಂದು ಸರೋವರಕ್ಕೆ ಸೇರುತ್ತದೆ. ಅದು ಸುಮಾರು 19ಸಾವಿರ ಕಿ.ಮೀ ವಿಸ್ತೀರ್ಣವಿರುವ ಒಂಟಾರಿಯೊ ಸರೋವರ.

ಜಲಪಾತಗಳ ಗಾತ್ರವೂ ಅಗಾಧ ಎನ್ನಬಹುದು. ಅಮೆರಿಕಾ ಜಲಪಾತ ಒಂದು ಬದಿಯಿಂದ ಇನ್ನೊಂದು ಬದಿಗೆ 1000 ಅಡಿ ವಿಸ್ತಾರವಿದ್ದು, 70ರಿಂದ 100 ಅಡಿ ಕೆಳಗೆ ಧುಮ್ಮಿಕ್ಕುತ್ತದೆ. ಹಾರ್ಸ್ಶೂ ಜಲಪಾತ 2600 ಅಡಿ ವಿಸ್ತಾರವಿದ್ದು, 188 ಅಡಿ ಕೆಳಕ್ಕೆ ಧುಮುಕುತ್ತದೆ. ಈ ಜಲಪಾತಗಳಿಂದ ಪ್ರತಿ ಸೆಕೆಂಡಿಗೆ ಸುಮಾರು 3100 ಟನ್ ನೀರು ಹರಿಯುತ್ತದೆ. ದಿನಕ್ಕೆ ಅಥವಾ ವಾರಕ್ಕೆ ಎಷ್ಟು ಎಂದು ಪರಿವರ್ತಿಸಲು ಯತ್ನಿಸಿದರೆ, ಲೆಕ್ಕ ಸಿಗೋದು ಕಷ್ಟ!

ನಮ್ಮ ದೋಣಿ ನೀರಿಗೆ ಹರಿವಿಗೆ ವಿರುದ್ಧವಾಗಿ ಜಲಪಾತದ ಕಡೆಗೆ ಮುಂದುವರೆತೊಡಗಿತು. ಆಹಾ! ಎಂತಹ ಮನಸೆಳೆವ ದೃಶ್ಯ. ಅಮೆರಿಕಾ ಜಲಪಾತದ ನಯನ ಮನೋಹರ ದೃಶ್ಯ ನೋಡಿ ಜನರ ಉತ್ಸಾಹದ ಕೂಗು ತಾರಕಕ್ಕೇರಿತ್ತು. ಎತ್ತರದಿಂದ ಭೋರ್ಗರೆಯುತ್ತಾ ಜಲಪಾತ ಸತತವಾಗಿ ಧುಮಕುವ ಪರಿ ರೋಮಾಂಚಕಾರಿ. ನೀರು ಕಾಣದೆ ಕೇವಲ ಹಾಲು ಚಿಮ್ಮುತ್ತಿರುವ ಅನುಭವ.

ದೋಣಿ ನಿಧಾನವಾಗಿ ಹಾರ್ಸ್‌ಶೂ ಜಲಪಾತ ಬುಡದ ಹತ್ತಿರ ಸಾಗಿತು. ಮೇಲಿನಿಂದ ಪ್ರಪಾತಕ್ಕೆ ಧುಮಕುವ, ನಂಬಲಸಾಧ್ಯ ಪ್ರಮಾಣದಲ್ಲಿ ನೀರು ಕೆಳಗೆ ಬೀಳುವ ಈ ದೃಶ್ಯ ರಮಣೀಯ. ಬಿದ್ದ ನೀರಿನ ರಭಸಕ್ಕೆ, ಮೇಲೇರುವ ತುಂತುರು ನೀರು ಮುಖಕ್ಕೆ ಮುತ್ತಿಕ್ಕಿದಾಗ ಚಳಿಯ ಅನುಭವ. ಸೃಷ್ಟಿಯ ಈ ಸೌಂದರ್ಯ ಹಾಗೂ ವೈಭವವನ್ನು ಪದಗಳಲ್ಲಿ ಬಣ್ಣಿಸುವುದು ಕಷ್ಟ. ನೋಡುತ್ತಾ ಅಲ್ಲೇ ನಿಲ್ಲಬೇಕೆಂಬ ಆಸೆ. ಆದರೆ ಮನಸ್ಸು ತೃಪ್ತಿಯಾಗುವ

